**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೇ ನ್ಯಾಯಿಕ ದಂಡಾಧಿಕಾಗಳ ನ್ಯಾಯಾಲಯ, ಯಾದಗಿರಿ**

**ಸಿ.ಸಿ. ನಂ.182/2026**

ಫಿರ್ಯಾದುದಾರರು: ಶ್ರೀ ರಾಮಚಂದ್ರ ರಾವ್ ದಿಲ್ಲಿಕರ್ ತಂದೆ ಭೀಮರಾವ್ ದಿಲ್ಲಿಕರ್

ವಿರುದ್ಧ

ಆಪಾದಿತ: ಶ್ರೀ ಬಸವರಾಜ ಬಸ್ಸಣ್ಣ ಸೋಲ್ಗಿ

ಆಪಾದನೆ

ಶ್ರೀ ಅರುಣ ಚೌಗುಲೆ ಬಿ.ಎ.,ಎಲ್.ಎಲ್.ಬಿ.,(HonorsS) ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಕೆಳಕಂಡಂತೆ ದೋಷರೋಪಣೆಯನ್ನು ಹೊರಿಸುತ್ತಿದ್ದೇನೆ.

ಪಿರ್ಯಾದಿದಾರರು ಮತ್ತು ಆಪಾದಿತನಾದ ನೀವು ಪರಿಚಯಸ್ಥರಾಗಿರುತ್ತೀರಿ ಹಾಗೂ ಸದರಿ ಪರಿಚಯದ ಆಧಾರದ ಮೇಲೆ ನೀವು ದೂರುದಾರರಿಂದ ದಿನಾಂಕ **21.10.2025** ರಂದು ರೂ.**5,00,000/-**ನಗದು ಹಣವನ್ನು ದೂರದಾರದಿಂದ ಸಾಲವಾಗಿ ಪಡೆದುಕೊಂಡು ದೂರುದಾರರಿಗೆ ನೀವು ಖಾತೆ ಹೊಂದಿರುವ ಚಿತ್ತಾಪುರ ಶಾಖೆಗೆ ಸೇರಿದ **796716** ಮತ್ತು **796717** ಸಂಖ್ಯೆಯ ಒಟ್ಟು ಎರಡು ಚೆಕ್ಕುಗಳಲ್ಲಿ ರೂ**. 1,00,000/-** ಹಾಗೂ ದಿನಾಂಕ **21.10.2025** ಎಂದು ನಮೂದು ಮಾಡಿ ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ನೀಡಿದ್ದಿರಿ ಹಾಗೂ ರೂ**.4,00,000/-** ಗಳನ್ನು **6** ತಿಂಗಳ ಒಳಗಾಗಿ ಮರುಪಾವತಿಸುವುದಾಗಿ ಹೇಳಿರುತ್ತೀರಿ. ಆದರೆ ಆಪಾದಿತನಾದ ನೀವು ಹಣವನ್ನು ಮರುಪಾವತಿಸದೆ ಇರುವ ಕಾರಣ ನೀವು ಹೇಳಿದಂತೆ ನಿಮ್ಮ ಖಾತೆಯ ಸದರಿ ಚಕ್ಕುಗಳನ್ನು ದೂರುದಾರರು ದಿನಾಂಕ **10.11.2025** ರಂದು ನಗದೀರಣಕ್ಕಾಗಿ ತಾವು ಖಾತೆ ಹೊಂದಿರುವ ಯಾದಗಿರಿ ಎಸ್.ಬಿ.ಐ ಬ್ಯಾಂಕ್, ಯಾದಗಿರಿ ಶಾಖೆಯಲ್ಲಿ ಹಾಜರು ಪಡಿಸಿದಾಗ "Funds Insufficient" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ಚೆಕ್ಕನ್ನು ದಿನಾಂಕ **11.11.2025** ರಂದು ವಾಪಸ್ಸು ನೀಡಿರುತ್ತಾರೆ. ನಂತರ ದೂರುದಾರರು ತಮ್ಮ ವಕೀಲರ ಮೂಲಕ ದಿನಾಂಕ **02.12.2025** ರಂದು ಅಪಾದಿತನಾದ

ನಿಮ್ಮ ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ಸದರಿ ನೋಟಿಸ್ ನಿಮಗೆ ದಿನಾಂಕ **05.12.2025** ರಂದು ಜಾರಿಯಾಗಿರುತ್ತದೆ. ಆಪಾದಿತನಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರು ದೂರುದಾರರಿಗೆ ಚೆಕ್‌ನ್ನು ನೀಡಿ ನಂತರ ಚೆಕ್ ಮೊತ್ತವನ್ನು ಪಾವತಿ ಮಾಡದೆ ಇರುವುದರ ಮೂಲಕ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ **138** ರ ರಿತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಾ ಎಂದು ಆಪಾದಿಸಲಾಗಿದೆ.

ಪ್ರಶ್ನೆ- 1 : ನಿಮ್ಮ ಮೇಲೆ ಹೊರಿಸಲಾಗಿರುವ ಆಪಾದನೆಯನ್ನು
ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ :

ಪ್ರಶ್ನೆ-2 : ನೀವು ಸದರೀ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ
ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೆ ?

ಉತ್ತರ :

(ಮೇಲ್ಕಂಡಂತೆ ಆಪಾದನೆಯನ್ನು ಆಪಾದಿತನಿಗೆ ತಿಳಿದ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರಗಳನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ.)

ದಿನಾಂಕಃ 13.03.2026.
ಸ್ಥಳಃ ಯಾದಗಿರ

ಪ್ರಧಾನ ದಿವಾಣಿ ನ್ಯಾಯಾಧಿಶರು
ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ಯಾದಗಿರಿ.